**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.2200/2022**

ಪಿ.ಡಬ್ಲ್ಯೂ: 6

ಸಿ.ಡಬ್ಲ್ಯೂ: 13

| | |
|---|---|
| ಸಾಕ್ಷಿದಾರರ ಹೆಸರು | : ಧರಣೇಶ್ |
| ತಂದೆಯ ಹೆಸರು: | : ಚಂದ್ರಬೋವಿ |
| ವಯಸ್ಸು | : **43 ವರ್ಷ** |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ಬರಗೇನಹಳ್ಳಿ |

**ದಿನಾಂಕ: 10-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿ: 23-05-2023 ರಂದು ಸೋಮವಾರ ಸಂಜೆ 5-00 ಗಂಟೆಗೆ ರಂಗೇನಹಳ್ಳಿ ಸಂತೆ ಮಾರ್ಕೆಟ್ ನಲ್ಲಿ ಅಪಘಾತವಾಗಿದ್ದನ್ನು ನಾನು ನೋಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿ ತನ್ನ ಬಾಬ್ತು ಬೈಕಿನಿಂದ ಪಾರ್ವತಮ್ಮನವರಿಗೆ ಗುದ್ದಿ ಅಪಘಾತಪಡಿಸಿರುತ್ತಾರೆ. ಪಾರ್ವತಮ್ಮನವರಿಗೆ ತಲೆಗೆ ತೀವ್ರತರಹದ ಪೆಟ್ಟಾಗಿರುತ್ತದೆ. ನಾವೇ ಪಾರ್ವತಮ್ಮನವರನ್ನು ಶಿವಮೊಗ್ಗದ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಪಾರ್ವತಮ್ಮನವರು ಕೋಮಕ್ಕೆ ಹೋಗಿದ್ದು, ನಂತರ 8 ದಿನಗಳ ನಂತರ ಮೃತಪಟ್ಟಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು:** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕ: **16-05-2022** ರಂದು ಸೋಮವಾರ ರಂಗೇನಹಳ್ಳಿ ಗ್ರಾಮದಲ್ಲಿ ಸಂತೆ ಇದ್ದ ಕಾರಣ ನಾನು ಮತ್ತು ರವಿಕುಮಾರ್ ಸಂತೆಗೆ ಹೋಗಿರುತ್ತೇನೆಂದರೆ ಸರಿ. ತರೀಕೆರೆ ಕಡೆಯಿಂದ ಆರೋಪಿ ಓಡಿಸುತ್ತಿದ್ದ ಕೆಎ **14** ಇ ಯು **3503** ಹಿರೋ ಸ್ಪ್ಲೆಂಡರ್ ಪ್ಲಸ್ ಬೈಕು ಅತೀವೇಗ ಹಾಗೂ ಅಜಾಗರೂಕತೆಯಿಂದ ರಸ್ತೆ ದಾಟುತ್ತಿದ್ದ ಪಾರ್ವತಮ್ಮನವರಿಗೆ ಗುದ್ದಿದ ಪರಿಣಾಮ ಪಾರ್ವತಮ್ಮನವರಿಗೆ ತಲೆಗೆ ತೀವ್ರತರಹದ ಪೆಟ್ಟಾಗಿ ಮೈಕೈಗೆ ಪೆಟ್ಟಾಗಿರುತ್ತದೆ ಎಂದರೆ ಸರಿ. ಸದಗಿ

ಅಪಘಾತಕ್ಕೆ ಆರೋಪಿಯ ನಿರ್ಲಕ್ಷತನವೇ ಕಾರಣ, ಸದರಿ ಘಟನೆಯನ್ನು ನಾನು ನನ್ನ ಕಣ್ಣಾರೆ ಕಂಡಿರುತ್ತೇನೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.</u>**

ತರೀಕರೆಯಿಂದ ಲಕ್ಕವಳ್ಳಿ ಹೋಗುವ ದಾರಿಯಲ್ಲಿ ರಂಗೇನಹಳ್ಳಿ ಗ್ರಾಮದಲ್ಲಿ ಸೋಮವಾರ ಸಂತೆ ನಡೆಯುತ್ತದೆ ಎಂದರೆ ಸರಿ. ಸದರಿ ಸಂತೆ ರಸ್ತೆಯ ಎಡಭಾಗದಲ್ಲಿ ನಡೆಯುತ್ತದೆ ಎಂದರೆ ಸರಿ. ನಾವು ರಸ್ತೆಯ 50 ಅಡಿ ದೂರದಲ್ಲಿ ನಿಂತಿದ್ದೆವು. ಆ ದಿನ ಸಂತೆಯಲ್ಲಿ ಬಹಳ ಜನ ಇದ್ದರು ಎಂದರೆ ಸರಿ. ಸಂತೆ ಬಹಳ ಜನ ಇದ್ದ ಕಾರಣ ಯಾವುದೇ ವಾಹನ ವೇಗವಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಸರಿ. ಆರೋಪಿಯು ವಾಹನವನ್ನು ನಿಧಾನವಾಗಿ ಚಲಾಯಿಸುತ್ತಿದ್ದರು ಎಂದರೆ ಸರಿ. ಪಾರ್ವತಮ್ಮನವರು ರಸ್ತೆಗೆ ಅಚಾನಕ್ಕಾಗಿ ಬಂದರು ಎಂದರೆ ಸರಿ. ಆರೋಪಿಯ ವಾಹನಕ್ಕೆ ಪಾರ್ವತಮ್ಮ ಅಚಾನಕ್ಕಾಗಿ ಸಿಕ್ಕಿ ಆರೋಪಿ ವಾಹನ ನಿಂತಿದ್ದ ಜಾಗದಲ್ಲೇ ಬಿದ್ದಿರುತ್ತಾರೆಂದರೆ ಸರಿ. ಪಾರ್ವತಮ್ಮನವರಿಗೆ ವಯಸ್ಸಾದ ಕಾರಣ ಅವರಿಗೆ ನಿಲ್ಲಲು ಸಾಧ್ಯವಾಗದೇ ಬಿದ್ದಿರುತ್ತಾರೆಂದರೆ ಸರಿ. ಆರೋಪಿಯು ವಾಹನವನ್ನು ವೇಗವಾಗಿ ಚಲಾಯಿಸಿರುವುದಿಲ್ಲ, ಪಾರ್ವತಮ್ಮನವರ ನಿರ್ಲಕ್ಷತನದಿಂದಲೇ ಸದರಿ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿ.

**<u>ಮರುವಿಚಾರಣೆ</u>**: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**